# ತ್ರಿಕಾಲಗಳ ಕನ್ನಡಿ ದುಬೈ ಫ್ರೇಮ್



**ದುಬೈನ ಗತ, ವರ್ತಮಾನ ಹಾಗೂ ಭವಿಷ್ಯತ್ತನ್ನು ಒಂದೆಡೆಯೇ ಕಾಣಿಸುವ ಅಪೂರ್ವ ರಚನೆ 'ದುಬೈ ಫ್ರೇಮ್'. ರೋಚಕ–ರಮ್ಯ ಅನುಭವಗಳನ್ನು ಪ್ರವಾಸಿಗರ ಅನುಭವಕ್ಕೆ ತರುವ ಈ '3 ಡಿ' ರಚನೆ ಅಪರಿಮಿತ ಮನರಂಜನೆಯನ್ನೂ ಹೊಂದಿದೆ.**

**■ ಕೆ.ಎಸ್. ರವಿಕುಮಾರ್**

ನಮ್ಮ ಸುಂದರ ಭಾವಚಿತ್ರಕ್ಕೆ ಒಂದು ಸೊಗಸಾದ ಚೌಕಟ್ಟು (Frame) ತೊಡಿಸಿ ಗೋಡೆಯ ಮೇಲೆ ತೂಗುಬಿಟ್ಟೋ, ಮೇಜಿನ ಮೇಲೋ ಅಥವಾ ಷೋಕೇಸಿನಲ್ಲಿಟ್ಟೋ ಮತ್ತೆ ಮತ್ತೆ ನೋಡಿ ಖುಷಿಪಡುತ್ತಿರುತ್ತೇವೆ, ಅಲ್ಲವೇ? ಆದರೆ ಆ ಚೌಕಟ್ಟು ಕಟ್ಟಡದ ರೀತಿ ಬೃಹದಾಕಾರಕ್ಕೆ ಬೆಳೆದುನಿಂತು ಭಾವಚಿತ್ರದಲ್ಲಿ ಮುಗುಳುನಗುವ ನಾವು ಸಜೀವವಾಗಿ ಅದರ ನಾಲ್ಕು ಪಕ್ಕಗಳ ಒಳಗೆಲ್ಲ ನಡೆಯುತ್ತ, ಓಡುತ್ತ, ಭಾವೋದ್ರೇಕಕ್ಕೆ ಒಳಗಾದಂತೆ ಸಂಭ್ರಮಿಸುವುದನ್ನು ಕಲ್ಪಿಸಿಕೊಳ್ಳಿ. ಇಂತಹುದೊಂದು ವಿನೂತನ ವಿಲಕ್ಷಣ ಅನುಭವವನ್ನು ನಾವು ದುಬೈನಲ್ಲಿರುವ 'ದುಬೈ ಚೌಕಟ್ಟು' ಅಥವಾ 'ದುಬೈ ಫ್ರೇಮ್'ನಲ್ಲಿ ಹೊಂದಬಹುದಾಗಿದೆ.

ಸಿವಿಲ್ ಎಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪದ ತಂತ್ರಜ್ಞಾನದಲ್ಲಿ ಸಾಧ್ಯವಿರುವ ಎಲ್ಲ ಸೊಬಗಿನ ಸೋಜಿಗದ ಆಯಾಮಗಳನ್ನು ಬಳಸಿಕೊಂಡು ಮುಗಿಲು ಚುಂಬಿಸುವ ಕಟ್ಟಡಗಳನ್ನು ವಿಶ್ವಮಟ್ಟದ ಪ್ರವಾಸಿತಾಣವನ್ನಾಗಿಸುವ ಕಲೆ ಸಂಯುಕ್ತ ಅರಬ್ ಎಮಿರೇಟ್ಸ್ (U.A.E)ಗೆ ಕರಗತವಾಗಿರುವಂತಿದೆ. ಈ ದೇಶದ ಅಬುದಾಭಿ, ದುಬೈ, ಶಾರ್ಜಾ ಹೀಗೆ ಎಲ್ಲಿ ಹೋದರೂ ವಿಭಿನ್ನ ಶೈಲಿಯ ಕಟ್ಟಡಗಳು ಬಹು ದೂರದಿಂದಲೇ ಗಮನದ ಜೊತೆ ಮನವನ್ನೂ ಸೆಳೆಯುತ್ತವೆ.

ದುಬೈ ಫ್ರೇಮ್ ಅನ್ನು ವಿನ್ಯಾಸಗೊಳಿಸಿದ್ದು ಮೆಕ್ಸಿಕೋದ ಫೆರ್ನಾಂಡೋ ಡೋನಿಸ್ ಎಂಬ ಅಂತರರಾಷ್ಟ್ರೀಯ ಖ್ಯಾತಿಯ ಎಂಜಿನಿಯರ್. ಆಯತಾಕಾರದ 'ದುಬೈ ಫ್ರೇಮ್' ಜಗತ್ತಿನ ಅತಿದೊಡ್ಡ ಮೂರು ಆಯಾಮದ ಫ್ರೇಮ್ ಎಂದು 'ಗಾರ್ಡಿಯನ್' ಪತ್ರಿಕೆ ಗುರುತಿಸಿದೆ. ಇದು 150 ಮೀಟರ್ ಎತ್ತರ (ಸುಮಾರು 50 ಮಹಡಿಯ ಎತ್ತರಕ್ಕೆ ಸಮ ಎನ್ನಬಹುದು) ಹಾಗೂ 93 ಮೀಟರ್ ಅಗಲವಿದೆ. ಹೊರಭಾಗವು ಬಂಗಾರಬಣ್ಣ ಲೇಪಿತ ಸ್ಟೀಲಿನ ಅಸಂಖ್ಯ ವರ್ತುಲಗಳು ಮತ್ತು ಹಾಳೆಗಳಿಂದ ಕಂಗೊಳಿಸುತ್ತದೆ. ಆಚೆ ಈಚಿನ ಲಂಬ ಬಾಹುಗಳಲ್ಲಿ ಎಲಿವೇಟರ್‌ಗಳಿವೆ.